**ದಿನಾಂಕ 13.03.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಬಿ.ಜಿ.ಆರ್. ವಕೀಲರಿಂದಃ**

1. ನಾನು ಹುಯಿಲ್ದೊರೆ ಕಾವಲ್ ನ ನಿವಾಸಿ. ನಮ್ಮ ಮೂಲ ಪುರುಷ ಚಿಕ್ಕಯಲ್ಲಾಭೋವಿ ಎಂದರೆ ಸಾಕ್ಷಿಯು ಆರ್ಬೆಳ್ ಯಲ್ಲಾಭೋವಿ ನನ್ನ ತಂದೆ ಎಂದು ನುಡಿಯುತ್ತಾರೆ. ನಮ್ಮ ತಾತನ ಹೆಸರು ತಿಮ್ಮಾಭೋವಿ, ನಮ್ಮ ಮುತ್ತಾತನ ಹೆಸರು ತಿಮ್ಮಾಭೋವಿ. ನಮ್ಮ ಮೂಲ ಪುರುಷ ಚಿಕ್ಕಯಲ್ಲಾಭೋವಿ ಎಂದು ಯಾರು ಇಲ್ಲ. ತಿಮ್ಮಾಭೋವಿಗೆ 03 ಜನ ಮಕ್ಕಳು ಅವರುಗಳೆಂದರೆ ತಿಮ್ಮಾಭೋವಿ, ಕುಂಟರಾಮಭೋವಿ ಮತ್ತು ಆರುಬೆಳ್ ಯಲ್ಲಾಭೋವಿ @ ಯಲ್ಲಾಭೋವಿ. ನನ್ನ ತಾತ ತಿಮ್ಮಾಭೋವಿಯನ್ನು ಆರ್ಬೆಳ್ ತಿಮ್ಮಾಭೋವಿ ಎಂದು ಕರೆಯುತ್ತಿದ್ದರು. ಅವರ ಹೆಂಡತಿಯ ಹೆಸರು ಕೊಲ್ಲಮ್ಮ. ಆರುಬೆಳ್ ತಿಮ್ಮಾಭೋವಿಯ ತಂದೆಯ ಹೆಸರು ಆರುಬೆಳ್ಳ ಯಲ್ಲಾಭೋವಿ, ಚಿಕ್ಕಯಲ್ಲಾಭೋವಿ ಅಲ್ಲ.
2. ನಾನು ತಹಶೀಲ್ದಾರರಿಂದ ವಂಶವೃಕ್ಷವನ್ನು ಪಡೆದುಕೊಂಡಿದ್ದೇನೆ. ಸದರಿ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸರ್ವೆ ನಂ. 35/2 ರ ಜಮೀನಿನ ಭಾಗ ಯಾವ ವರ್ಷ ಆಗಿದೆ ಮತ್ತು ಯಾರ ಯಾರ ನಡುವೆ ಭಾಗ ಆಗಿದೆ ಎಂದರೆ ಸಾಕ್ಷಿಯು ನಾನು, ನನ್ನ ತಂದೆ ಭಾಗ ಬೇಕು ಎಂದು ಕೇಸನ್ನು ತಂದಿದ್ದೆವು, ಅದರಂತೆ ಭಾಗವಾಗಿದೆ. ನನ್ನ ತಂದೆ ಸುಮಾರು 15 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆಯ ಮರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ತೆಗೆದುಕೊಂಡಿದ್ದೇವೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.
3. ನನ್ನ ತಂದೆ ಆರುಬೆಳ್ಳ ಯಲ್ಲಾಭೋವಿ ಓ.ಎಸ್.130/2000 ರ ದಾವೆಯನ್ನು ಯಾರ ಯಾರ ವಿರುದ್ಧ ಹಾಕಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಯ ಅಣ್ಣ ತಿಮ್ಮಾಭೋವಿ, ಗಣೇಶ, ಕುಂಟರಾಮಣ್ಣ ಮಕ್ಕಳು, ಗಣೇಶನ ಮೂಲ ಮಕ್ಕಳ ವಿರುದ್ಧ ದಾವೆ ತಂದಿದ್ದರು. ಕುಂಟರಾಮಯ್ಯನ ಮಗ ತಿಮ್ಮಯ್ಯ. ಸದರಿ ಕೇಸನ್ನು ನೀವೇನೂ ಹಾಕಿರಲಿಲ್ಲ ಎಂದರೆ

ಸಾಕ್ಷಿಯು ನಾನೇ ಹಾಕಿ ನಾನೇ ನ್ಯಾಯಾಲಯಕ್ಕೆ ಓಡಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಕೇಸಿನಲ್ಲಿ ವಿಚಾರಣೆಯನ್ನು ನಾನೇ ಕೊಟ್ಟಿದ್ದೇನೆ. ಅವರು ಯಾರು ಯಾರು ಕೇಸನ್ನು ನಡೆಸಲು ಬಂದಿದ್ದರು ಎಂದರೆ ಸಾಕ್ಷಿಯು ಸಮನ್ಸ್ ಕಳುಹಿಸಿದರೂ ಯಾರು ಬಂದಿರಲಿಲ್ಲ, ಆ ಪೈಕಿ ಇಬ್ಬರು ಗಿಡ್ಡತಿಮ್ಮನ ಮಕ್ಕಳು ಮತ್ತು ವಾದಿಯರ ತಾಯಿ ಸಮನ್ಸ್ ತೆಗೆದುಕೊಂಡಿದ್ದರು. ವಾದಿ ಸಮನ್ಸ್ ತೆಗೆದುಕೊಂಡಿರಲಿಲ್ಲ. ಸದರಿ ದಾವೆಯಲ್ಲಿ ಏನು ಆದೇಶವಾಗಿದೆ ಎಂದರೆ ಸಾಕ್ಷಿಯು ನಮ್ಮ ಪರ ಆದೇಶವನ್ನು ನಾವು ಖಾತೆಯನ್ನು ಮಾಡಿಸಿಕೊಂಡು ಹದ್ದುಬಸ್ತು ಮಾಡಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲೂ ಸಹ ತಹಶೀಲ್ದಾರರಿಂದ ಪಡೆದ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸೆಕರೇಟರಿಯಿಂದ ನಮಗೆ ಬೇಕಾದಂತೆ ವಂಶವೃಕ್ಷವನ್ನು ಮಾಡಿಸಿಕೊಂಡು ಸುಳ್ಳು ವಂಶವೃಕ್ಷವನ್ನು ಸದರಿ ದಾವೆಯಲ್ಲಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

4. ಇಲ್ಲಿಯವರೆಗೂ ನಮ್ಮ ತಂದೆಯದಾಗಲೀ ಅಥವಾ ತಾತನದಾಗಲೀ ಯಾರದೇ ಮರಣ ಪತ್ರವನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಗಣೇಶ ಎನ್ನುವವರು ನನ್ನ ವಿರುದ್ಧ ಈ ದಾವೆಯನ್ನು ಹಾಕಿದ್ದಾರೆ. ಗಣೇಶ್ ರವರ ತಂದೆ ಹನುಮಂತಯ್ಯ. ಹನುಮಂತಯ್ಯನ ತಂದೆ ತಿಮ್ಮಾಭೋವಿ ಎಂದರೆ ಸರಿ. ವಾದಿಯ ತಾತ ತಿಮ್ಮಾಭೋವಿಗೂ ಮತ್ತು ಆರುಬೆಳ್ಳ ಯಲ್ಲಾಭೋವಿಗೂ ಯಾವುದೇ ರಕ್ತಸಂಬಂಧವಿಲ್ಲ ಎಂದರೆ ಸರಿಯಲ್ಲ, ಅವರೆಲ್ಲರೂ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಎಂದು ಸಾಕ್ಷಿ ನುಡಿಯುತ್ತಾರೆ. ಆರುಬೆಳ್ಳ ಯಲ್ಲಾಭೋವಿಗೆ ಎಷ್ಟು ಆಸ್ತಿಗಳು ಎಂದರೆ ಸಾಕ್ಷಿಯು ಸರ್ವೆ ನಂ. 35/2 ಮತ್ತು 36/9 ರ ಎರಡು ಆಸ್ತಿಗಳು ಇದ್ದವು. ಸದರಿ ಆಸ್ತಿಗಳು ಆರುಬೆಳ್ಳ ಯಲ್ಲಾಭೋವಿಗೆ ಪಿತ್ರಾರ್ಜಿತ ಸ್ವತ್ತಿನ ಮೂಲಕ ಬಂದಿದೆ. ಸದರಿ ಆಸ್ತಿಗಳು ವಾದಿ ಗಣೇಶನ ತಾತ ತಿಮ್ಮಾಭೋವಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯ ಮುತ್ತಾತ ಆರುಬೆಳ್ಳ ತಿಮ್ಮಾಭೋವಿಗೆ ಸದರಿ ಆಸ್ತಿಗಳು ಸರ್ಕಾರದಿಂದ ಮಂಜೂರಾಗಿದ್ದು, ಅವರ ಮೂರು ಜನ ಮಕ್ಕಳು ಹಂಚಿಕೊಂಡಿರುತ್ತಾರೆ.

5. ಆರುಬೆಳ್ಳ ತಿಮ್ಮಾಭೋವಿಗೆ ಸರ್ಕಾರದಿಂದ ಮಂಜೂರಾದ ದಾಖಲಾತಿಗಳನ್ನು ನಾನು ನೋಡಿದ್ದೇನೆ, ಅವುಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಾತ ಮತ್ತು ವಾದಿ ಗಣೇಶನ ತಾತ ಇಬ್ಬರೂ ಬೇರೆ ಬೇರೆ ಎಂದರೆ ಸರಿಯಲ್ಲ. ಸುಮಾರು 70-80 ವರ್ಷಗಳಿಂದಲೂ ಬೇರೆ ಬೇರೆ ವಾಸ ಮಾಡಿಕೊಂಡು ಬಂದಿದ್ದಾರೆ ಎಂದರೆ ಸಾಕ್ಷಿಯು ಮನೆಗಳು ಮಾತ್ರ ಬೇರೆ ಬೇರೆ ಇವೆ ಆದರೆ ಜಮೀನನ್ನು ಮಾತ್ರ ಜಂಟಿಯಾಗಿ ಅನುಭವ ಮಾಡಿಕೊಂಡು ಬಂದಿದ್ದಾರೆ ಎಂದು ನುಡಿಯುತ್ತಾರೆ. ಗಣೇಶನ ತಾತನಿಗೆ ಮಂಜೂರಾದ ಜಮೀನನ್ನು ಸರ್ಕಾರದವರು ದಾಖಲಾತಿಯನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ನನ್ನ ತಂದೆ ಊರ ಹೊರಗೆ ಹೋಗಿದ್ದ ಕಾರಣ ಆತನ ಹೆಸರಿಗೆ ಮಾಡಿಸಿಕೊಂಡಿದ್ದನು.

6. ನಮ್ಮ ಗ್ರಾಮದಲ್ಲಿ ತಿಮ್ಮಾಭೋವಿ ಮತ್ತು ಹನುಮಂತಭೋವಿ ಎನ್ನುವ ಹೆಸರುಗಳು ಇರುವ ಬಹಳಷ್ಟು ಜನರು ಇದ್ದಾರೆ ಎಂದರೆ ಸರಿ, ಆದರೆ ಅವರುಗಳು ನಮಗೆ ಸಂಬಂಧಪಟ್ಟಿಲ್ಲ ಎಂದು ನುಡಿಯುತ್ತಾರೆ. ಗಣೇಶನ ತಾತ ತಿಮ್ಮಾಭೋವಿ ಮತ್ತು ಆರುಬೆಳ್ಳ ಯಲ್ಲಾಭೋವಿಗೂ ಬೇರೆ ಬೇರೆಯಾಗಿ ಸರ್ಕಾರದವರು ಜಮೀನನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿ ಗಣೇಶ ಮತ್ತು ಅವರ ತಂದೆ ಅವಿದ್ಯಾವಂತರು ಎಂದರೆ ಸರಿ. ಗಣೇಶನ ತಾತ ತಿಮ್ಮಾಭೋವಿಯವರು 15.12.1987 ರಲ್ಲಿ ಸರ್ವೆ ನಂ. 35/2 ರ 7 ಎಕರೆ 11 ಗುಂಟೆಯ ಜಮೀನನ್ನು ನೊಂದಣಿ ವಿಲ್ ಪತ್ರವನ್ನು ಮಾಡಿದ್ದರು ಎಂದರೆ ಸರಿಯಲ್ಲ, ಅವರ ತಾತ ತೀರಿಕೊಂಡ ನಂತರ ಯಾರನ್ನೋ ಕರೆದುಕೊಂಡು ಬಂದು ಹೆಬ್ಬೆಟ್ಟು ರುಜು ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ವಾದಿ ಗಣೇಶ್ ರವರ ತಾತ ತಿಮ್ಮಾಭೋವಿ ತೀರಿಕೊಂಡ ಸಮಯದಲ್ಲಿ ನನಗೆ 20 ವರ್ಷ ವಯಸ್ಸು, ಅವರ ಮರಣ ಪತ್ರವನ್ನು ನಾನು ಸುಮಾರು 20 ವರ್ಷಗಳ ಹಿಂದೆಯೇ ಪಡೆದುಕೊಂಡಿದ್ದೇನೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

7. ಓ.ಎಸ್.130/2000 ದಾವೆಯನ್ನು ಸಲ್ಲಿಸುವ ಕಾಲಕ್ಕೆ ವಾದಿ ಗಣೇಶನ ತಾತ ತಿಮ್ಮಾಭೋವಿಯ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ಹಾಜರುಪಡಿಸಿದ್ದೆನು. ವಿಲ್ ನ ವಿಚಾರವನ್ನು

ಓ.ಎಸ್.130/2000 ದಾವೆಯಲ್ಲಿ ತಿಳಿಸಿದ್ದೇನೆ. ನಾನು ಓ.ಎಸ್.130/2000 ದಾವೆಯಲ್ಲಿ ಪಕ್ಷಗಾರನಲ್ಲ ಎಂದರೆ ಸರಿಯಲ್ಲ. ನಾನು ಓ.ಎಸ್.130/2000 ದಾವೆಯನ್ನು ನಡೆಸಲು ನನ್ನ ತಂದೆಯಿಂದ ಜಿ.ಪಿ.ಎ. ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಾಗಿದ್ದಾಗಲೇ ನಾನು ಜಿ.ಪಿ.ಎ. ನ್ನು ಪಡೆದುಕೊಂಡೇ ನ್ಯಾಯಾಲಯದ ಒಳಗೆ ಹೋಗಿದ್ದೇನೆ ಎಂದು ನುಡಿಯುತ್ತಾರೆ. ಓ.ಎಸ್.130/2000 ದಾವೆಯಲ್ಲಿ ಮರಣ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಮತ್ತು ವಂಶವೃಕ್ಷ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದೆನು ಎಂದು ಸಾಕ್ಷಿ ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**